ಪ್ರತಿಬಿಂಬ

PRATIBIMBA –Multidisciplinary Kannada Research Journal of IIMRD
ISSN: 2582-2284
Vol-7 Issue-5, March - April 2026, Pp. 16-24
©*IIMRD*, Mysuru

IIMRD JOURNALS

www.iimrd.com

# ಅನುಪಮಾ ನಿರಂಜನ ಅವರ ದಿನಕ್ಕೊಂದು ಕಥೆ: ಪ್ರಾಣಿ ನೀತಿಬೋಧೆ

**ಡಾ. ಪ್ರೇಮ ಎಸ್**
ಕನ್ನಡ ಸಹಾಯಕ ಪ್ರಾಧ್ಯಾಪಕರು, ಮಲ್ಲಮ್ಮ ಮರಿಮಲ್ಲಪ್ಪ ಮಹಿಳಾ ಕಲಾ ಮತ್ತು
ವಾಣಿಜ್ಯ ಪದವಿ ಕಾಲೇಜು, ಮೈಸೂರು

**ಸಾರಾಂಶ: (Abstract)**

*ಕನ್ನಡ ಸಾಹಿತ್ಯದಲ್ಲಿ ಮಕ್ಕಳ ಸಾಹಿತ್ಯ ಮತ್ತು ಕಥೆಗಳಿಗೆ ಒಂದು ಮಹತ್ವದ ಸ್ಥಾನವಿದೆ. ನವೋದಯ ಕಾಲಘಟ್ಟದಲ್ಲಿಯೇ ಮಕ್ಕಳ ಸಾಹಿತ್ಯ ಆರಂಭವಾಯಿತು. ಕನ್ನಡದಲ್ಲಿ ಸಾಹಿತ್ಯದ ಆರಂಭದ ಜೊತೆಗೆ ಕಥೆಯ ವಸ್ತು ವಿಶ್ಲೇಷಣೆಯು ಪ್ರಕ್ರಿಯೆಯು ಬೆಳೆದು ಬಂದಿದೆ. ಕನ್ನಡ ಭಾಷೆ ಮತ್ತು ಸಾಹಿತ್ಯದಲ್ಲಿ ಕಥೆಗಳು ಸಹ ಅಪಾರವಾದ ಪ್ರಭಾವವನ್ನು ಬೀರಿರುವುದು ಕಂಡುಬರುತ್ತದೆ. ನೀತಿಕಥೆಗಳು, ಕಿನ್ನರ ಕಥೆಗಳು, ಸ್ತ್ರೀ ಸಂವೇದನೆ ಕಥೆಗಳು, ಪ್ರಾಣಿ ಸಂವೇದನೆ ಕಥೆಗಳು ಕನ್ನಡ ಸಾಹಿತ್ಯದಲ್ಲಿ ನಿಚ್ಚಳವಾಗಿ ಕಂಡುಬರುತ್ತವೆ. ಕನ್ನಡ ನಾಡಿನಲ್ಲಿ ಪ್ರಸಿದ್ಧ ಬರಹಗಾರ್ತಿಯಾಗಿ ವೈದ್ಯರಾಗಿ ಜನಾನುರಾಗಿಗಳಾಗಿ ಅಪಾರವಾದ ಪ್ರಸಿದ್ಧಿ ಪಡೆದು ಅನುಪಮಾ ನಿರಂಜನ ಅವರು 1934ರ ಮೇ 17ರಂದು ತೀರ್ಥಹಳ್ಳಿಯಲ್ಲಿ ಜನಿಸಿದರು. ವೃತ್ತಿಯಲ್ಲಿ ವೈದ್ಯರಾದ ಅನುಪಮಾ ಅವರು ಕನ್ನಡ ಕಾದಂಬರಿ ಕ್ಷೇತ್ರವು ತನ್ನ ಆಳ ಅಗಲಗಳನ್ನು ವಿಸ್ತರಿಸಿಕೊಂಡು ಮುನ್ನೆಡೆಯುತ್ತಿರುವ ಸಂದರ್ಭದಲ್ಲಿ ಆ ಕ್ಷೇತ್ರಕ್ಕೆ ಕಾಲಿಟ್ಟರು. ಒಳ್ಳೆಯ ಗಟ್ಟಿ ಸಾಹಿತಿಯಾಗಿ ಬೆಳೆದು ನಿಂತರು. ಕುಳಕುಂದ ಶಿವರಾಯರೆಂದೇ ಚಿರಪರಿಚಿತರಾಗಿದ್ದ ನಿರಂಜನವರೊಂದಿಗೆ ನಡೆದ ವಿವಾಹ ಅವರಿಗೆ ಲೇಖಕಿಯಾಗಿ ತಮ್ಮ ಗುರಿಯನ್ನು ಸಾಧಿಸುವಲ್ಲಿ ಮತ್ತಷ್ಟು ಸಹಕಾರಿಯಾಯಿತು.*

**ಮುಖ್ಯಪದಗಳು (Keywords):** *ಕನ್ನಡ ಸಾಹಿತ್ಯ, ಮಕ್ಕಳ ಸಾಹಿತ್ಯ, ದಿನಕ್ಕೊಂದು ಕಥೆ, ಪ್ರಾಣಿ ನೀತಿಬೋಧೆ.*

**ಪೀಠಿಕೆ**

ಡಾ.ಅನುಪಮಾ ನಿರಂಜನ ಅವರು ಬುದ್ಧಿ ವಿಕಾಸಕ್ಕೆ ಪ್ರೇರಕವಾಗಬಲ್ಲ ವಿಚಾರ ಸಾಹಿತ್ಯದ ಜೊತೆಗೆ ಕಥೆಗಳನ್ನು ಸಹ ರಚಿಸಿದರು. ಸಾಹಿತ್ಯದ ವೈವಿಧ್ಯತೆಯಲ್ಲಿ ಮಕ್ಕಳ ಸಾಹಿತ್ಯಕ್ಕೆ ಒಂದು ವಿಶಿಷ್ಟವಾದ ಸ್ಥಾನವಿದೆ. ಆದಕರೆ ಮಕ್ಕಳ ಬುದ್ಧಿಶಕ್ತಿ, ಮನೋಸಾಮರ್ಥ್ಯ ಹಾಗೂ ಆಸಕ್ತಿಯನ್ನಾಧರಿಸಿ ರಚಿತವಾದ ಕೃತಿಗಳು ಕಡಿಮೆ ಪ್ರಮಾಣದಲ್ಲಿವೆ. ದಿನಕ್ಕೊಂದು ಕಥೆಯು ಕಥಾಮೂಲಿಕೆ ಶಿಶುಸಾಹಿತ್ಯಕ್ಕೆ ಅನುಪಮಾ ಅವರ ಅನಪಮ ಕೊಡುಗೆಯಾಗಿದೆ. ಕಥೆಗಳಿಂದ ಮಕ್ಕಳಿಗಾಗುವ ಉಪಯೋಗ ಬ್ರಹ್ಮಾಂಡದಷ್ಟು ಕಥೆಗಳಿಂದ ಮಗುವಿನ ಕಲ್ಪನಾಶಕ್ತಿ ಬೆಳೆಯುತ್ತದೆ. ದಿನಕ್ಕೊಂದು ಕಥೆ ಕನ್ನಡದಲ್ಲಿ ಪುರಾಣ ಕಥೆಗಳನ್ನು ಇತರ ದೇಶಗಳ ಕಥೆಗಳನ್ನು

*Please cite this article as:* ಪ್ರೇಮ, ಎಸ್. (2026). ಅನುಪಮಾ ನಿರಂಜನ ಅವರ ದಿನಕ್ಕೊಂದು ಕಥೆ: ಪ್ರಾಣಿ ನೀತಿಬೋಧೆ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(5). ಪು.ಸಂ.* 16–24

ಜಾನಪದ ಕಥೆಗಳನ್ನು ಒಟ್ಟುಗೂಡಿಸಿ ಸರಳವಾಗಿ ಹೆಣೆಯಲಾದ ಸಂಪುಟಗಳ ಮಾಲಿಕೆ ವರ್ಷವಿಡೀ ದಿನಕ್ಕೊಂದು ಕಥೆಯಂತೆ ಓದಿಕೊಂಡು ಹೋಗಬಲ್ಲಂತೆ 365 ಕಥೆಗಳಿವೆ. "ಹೇಗೋ ನೂರಾರು ಕಥೆ ಬರೀತೀರಿ ಮುನ್ನೂರ ಅರವತ್ತೈದೇ ಬರೆದ್ಬಿಡಿ ದಿನಕ್ಕೊಂದು ಕಥೆಯ ಉದಯವಾಯಿತು" ಎಂದು ಈ ಕಥೆಗಳಲ್ಲಿನ ಮುನ್ನುಡಿಯಲ್ಲಿ ಡಾ.ಅನುಪಮ ನಿರಂಜನ ಅವರು ಬರೆದಿದ್ದಾರೆ.

ಒಂದು ಕಥೆ ಅಥವಾ ಆ ಕಥೆಯಲ್ಲಿನ ಶಬ್ಧಗಳು, ಮೌಲ್ಯಗಳು, ನೀತಿಗಳನ್ನು ಸಂಪೂರ್ಣವಾಗಿ ವಿಶ್ಲೇಷಣೆಯನ್ನು ಮಾಡಬಹುದಾಗಿದೆ. ಈ ದೃಷ್ಟಿಯಲ್ಲಿ ಕಥೆಗಳು ಮಾನವನ ವ್ಯಕ್ತಿತ್ವ, ಜನಾಂಗಗಳು ಆಲೋಚನೆಗಳಿಗೆ ಅಡ್ಡಗೋಡೆಗಳನ್ನು ನಿರ್ಮಿಸಿದರೆ ಆದರೆ ಕಥೆಗಳ ವಸ್ತುವಿಶ್ಲೇಷಣೆಯು ಕನ್ನಡ ಸಾಹಿತ್ಯದಲ್ಲಿ ಅಂದಿನಿಂದ ಇಂದಿನವರೆಗೂ ತನ್ನ ಕಾರ್ಯವನ್ನು ನಿರ್ವಹಿಸಿಕೊಂಡು ಬಂದಿರುವುದನ್ನು ನಾವು ನೋಡಬಹುದು. ಈ ನಿಟ್ಟಿನಲ್ಲಿ ಅನುಪಮಾ ನಿರಂಜನ ಅವರ ದಿನಕ್ಕೊಂದು ಕಥೆಯು ಮಕ್ಕಳ ಮನಮುಟ್ಟುವಂತದ್ದಾಗಿದ್ದು, ಇದರಲ್ಲಿ ಪ್ರಾಣಿಗಳ ಮೂಲಕ ನೀತಿಯನ್ನು ಹೇಳ ಹೊರಟಿರುವುದು ಮಕ್ಕಳ ಜೀವನ ರೂಪೀಕರಣದಲ್ಲಿ ಮಹತ್ವದ ಪಾತ್ರವನ್ನು ಈ ಕಥೆಗಳು ವಹಿಸುತ್ತವೆ.

**ಜಿಂಕೆ–ಸಾರಂಗ :** ಈ ಕಥೆಯಲ್ಲಿ ಲೇಖಕರು ಪ್ರಾಣಿಗಳ ಕುರಿತಾಗಿ ಕಥೆಯನ್ನು ಚಿತ್ರಿಸಿದ್ದಾರೆ. ತೋಳ ಎಂಬ ಪ್ರಾಣಿಯು ಮತ್ತೆರಡು ಪ್ರಾಣಿಗಳನ್ನು ಹಸಿವಾದಾಗ ತಿನ್ನಲು ಪ್ರಯತ್ನಿಸಿದಾಗ ಅವುಗಳ ಅಂದರೆ ಜಿಂಕೆ ಮತ್ತು ಸಾರಂಗಗಳು ತಮ್ಮ ಮಕ್ಕಳು (ಮರಿಗಳು)ಗಳನ್ನು ಬಿಟ್ಟು ಸಾಯಬೇಕಲ್ಲ ಎಂದು ಯೋಚಿಸಿ ತೋಳಕ್ಕೆ ಹೇಳಿದ ಮಾತುಗಳೂ ತುಂಬ ದುಃಖವನ್ನು ಉಂಟುಮಾಡುತ್ತದೆ.

ತೋಳವೂ ಕರುಣೆ ಹುಟ್ಟಿ ಜಿಂಕೆಯನ್ನು ತಮ್ಮ ಮರಿಗಳನ್ನು ನೋಡಲು ಬಿಟ್ಟಿತು. ಮತ್ತು ಸಾರಂಗವನ್ನು ಸಹ ತಮ್ಮ ಮರಿಗಳನ್ನು ನೋಡಿ ಮತ್ತೆ ವಾಪಸ್ಸು ಬರುವುದಕ್ಕೆ ಅನುಮತಿಯನ್ನು ನೀಡುತ್ತದೆ. ಇದನ್ನೇ ಮಕ್ಕಳು ತುಂಬ ಖುಷಿಯಂತೆ ಕೇಳಲು ಬಯಸುತ್ತಾರೆ. ಹಾಗೆಯೇ ಕೊನೆಯಲ್ಲಿ ಆಕಾಶದಿಂದ ದೇವದೂತನೊಬ್ಬ ಇಳಿದು ಬಂದು ಜಿಂಕೆ–ಸಾರಂಗಗಳನ್ನು ಮೆಚ್ಚಿಕೊಂಡನು. ಯಾಕೆಂದರೆ ಅವುಗಳ ಸತ್ಯದ ನಡೆತೆಯು ಅವುಗಳನ್ನು ದೊಡ್ಡವರ ಸ್ಥಾನದಲ್ಲಿ ನಿಲ್ಲಿಸಿದೆ ಎಂಬ ಯೋಚನೆ ಬಂದಿದ್ದ ಕಾರಣವಾಗಿದೆ. ದೇವದೂತನೊಬ್ಬ ಜಿಂಕೆ–ಸಾರಂಗಗಳು ಸ್ವರ್ಗದಲ್ಲಿ ಬದುಕಲ್ಲೂ ತಕ್ಕವರು ಆಗಿದ್ದೀರಿ ಎಂದು ಹೇಳಿ ಸ್ವರ್ಗಕ್ಕೆ ಕರೆದುಕೊಂಡು ಹೋದ.

ಅನುಪಮಾ ಅವರು ಈ ಕಥೆಯಲ್ಲಿ ದುಃಖ ಮತ್ತು ಸತ್ಯದ ನಡತೆಯ ಕುರಿತು ಮಕ್ಕಳಿಗೆ ಅರಿವು ಮೂಡಿಸುವಂತೆ ಹೇಳಿದ್ದಾರೆ. ಈ ಕಥೆಯನ್ನು ಕೇಳಿಸಿಕೊಳ್ಳುವ ಮತ್ತು ಓದುವವರಿಗೆ ತುಂಬ ಇಷ್ಟವಾಗುವಂತೆ ಸತ್ಯದ ದಾರಿಯು ನಮ್ಮನ್ನು ದೊಡ್ಡವರಾಗಿ ಮಾಡುತ್ತದೆ. ಹಾಗೂ ಸ್ವರ್ಗದ ಕಡೆಗೆ ಕರೆದೊಯ್ಯುತ್ತದೆ ಎಂಬ ಅರ್ಥದಲ್ಲಿ ವಿಶ್ಲೇಷಿಸಿದ್ದಾರೆ.

**ತೋಳದ ನ್ಯಾಯ :** ಈ ಕಥೆಯಲ್ಲಿ ಮೋಸಗಾರನನ್ನೂ ಎಂದೂ ನಂಬಬಾರದು ಎಂಬ ಸಂದೇಶವನ್ನು ಮನದಲ್ಲಿಟ್ಟುಕೊಂಡು ಕಥೆಯನ್ನು ಚಿತ್ರಿಸಿದ್ದಾರೆ ಎಂದು ಹೇಳಬಹುದು. ಇದು ಪ್ರಾಣಿ ಸಂವೇದನೆ ಕಥೆಯಾಗಿದೆ. ತೋಳವೂ ತುಂಬಾ ದುರಾಸೆಯಿಂದ ಬೇಟೆಯಾಡಿ ಸಿಕ್ಕಿದ ಮಾಂಸವನ್ನೆಲ್ಲಾ ತಾನೊಬ್ಬನೇ ತಿನ್ನುತ್ತಿತ್ತು. ದುರಾಸೆಯಿಂದ ತೋಳಕ್ಕೆ ಆಪತ್ತು ಉಂಟಾಯಿತು. ಏನೆಂದರೆ ಮೂಳೆಯೊಂದು ಅದರ

ಗಂಟಲಲ್ಲಿ ಸಿಕ್ಕಿಕೊಂಡಿತು. ಅದನ್ನು ತೆಗೆಯಲು ಯಾರು ಇರಲಿಲ್ಲ. ವೈದ್ಯರೂ ಕೂಡ ದೊರಕದ ಕಾರಣದಿಂದ ತನ್ನ ಕಷ್ಟವನ್ನು ಎದುರಿಸಲು ಯೋಚಿಸಿ ಸಿಕ್ಕಿ ಹಾಕಿಕೊಂಡಿರುವ ಮೂಳೆಯನ್ನು ತೆಗೆಯುವವರಿಗೆ ಬಹುಮಾನ ನೀಡುವುದಾಗಿ ಹೇಳುತ್ತದೆ. ನಂತರ ಕೊಕ್ಕರೆ ಬಂದು ತನ್ನ ಕೊಕ್ಕಿನ ಸಹಾಯದಿಂದ ತೆಗೆದು ನಂತರ ಬಹುಮಾನ ಕೊಡು ಎಂದು ಕೇಳಿದಾಗ ತೋಳ ತುಂಬ ಮೋಸದ ಮಾತು ಹೇಳುತ್ತದೆ. ನೀನೂ ಮೂಳೆಯನ್ನು ನನ್ನ ಬಾಯಿಯಿಂದ ತೆಗೆಯುವಾಗಲೇ ನಾನು ನಿನ್ನನ್ನೂ ತಿನ್ನಬಹುದಾಗಿತ್ತು. ಆದರೆ ನಾನು ತಿನ್ನದೇ ಬಿಟ್ಟೆನಲ್ಲಾ ಅದೇ ದೊಡ್ಡ ಬಹುಮಾನವೆಂದು ಹೇಳುತ್ತದೆ.

ಈ ಕಥೆಯಲ್ಲಿ ತೋಳವೂ ಮಾಡಿದ ಮೋಸವನ್ನು ನೋಡಿದಾಗ ನಮಗೆ ಕಷ್ಟದಲ್ಲಿ ಇರುವವರಿಗೆ ಸಹಾಯ ಮಾಡುವುದನ್ನು ತುಂಬ ಯೋಚಿಸಿ ಮಾಡಬೇಕು ಎಂದು ತಿಳಿಸುತ್ತಾರೆ. ಹಾಗೂ ಬಹುಮಾನದ ಆಸೆಯನ್ನು ಕೂಡ ಇಟ್ಟುಕೊಂಡು ಸಹಾಯವನ್ನು ಮಾಡಬಾರದು ಎಂದು ತಿಳಿಸುತ್ತದೆ. ಮಕ್ಕಳ ಮನಸ್ಸಿಗೆ ಒಂದು ರೀತಿಯಾಗಿ ಯೋಚಿಸಿ ಕೆಲಸ ಮಾಡಬೇಕು ಹಾಗೂ ದುರಾಸೆ ಇರಬಾರದು ಎಂಬ ಆಶಯವನ್ನು ಈ ಕಥೆಯು ಮನಸ್ಸಿನಲ್ಲಿ ಮೂಡಿಸುತ್ತದೆ.

**ನರಿ ಮತ್ತು ಮೊಲ :** ನರಿ ಮತ್ತು ಮೊಲ ಎಂಬ ಕಥೆಯಲ್ಲಿ ಸಹಾಯ ಮಾಡಲು ಬಂದವರನ್ನು ಕಷ್ಟದ ಪರಿಸ್ಥಿತಿಗೆ ಸಿಲುಕಿಸಿ ಬಿಡುವ ಕೆಲವು ದೃಶ್ಯಗಳನ್ನು ಕಾಣಬಹುದು. ಅನುಪಮ ನಿರಂಜನ ಅವರು ಕಷ್ಟಬಂದಾಗ ಹೇಗೆ ಅದನ್ನು ಎದುರಿಸಬೇಕುಎಂಬುದರ ಬಗ್ಗೆ ವಿಶ್ಲೇಷಿಸಿದ್ದಾರೆ. ಇದು ಒಂದು ರೀತಿಯ ಉತ್ಸಾಹ ಮತ್ತು ಪ್ರೇರಣೆಯನ್ನು ಮಕ್ಕಳಲ್ಲಿ ಮೂಡಿಸುವಂತಹ ಕಥೆಯಾಗಿದೆ. ಇದರಲ್ಲಿ ನರಿ ಮತ್ತು ಮೊಲ, ಕರಡಿ, ಹುಂಜ, ನಾಯಿ ಎಂಬ ಪಾತ್ರಗಳನ್ನು ಕಾಣಬಹುದು.

ಮೊದಲಿಗೆ ನರಿ ಮತ್ತು ಮೊಲ ಕಾಡಿನಲ್ಲಿ ವಾಸವಾಗಿದ್ದಾಗ ನರಿಯು ಮಾಡಿಕೊಂಡಿದ್ದ ಹಿಮದ ಗಡ್ಡೆಯ ಮನೆಯು ಬೇಸಗೆಯ ಬಿಸಿಲಿಗೆ ಕರಗಿ ಹೋದ್ದರಿಂದ ಮೊಲವೂ ತನ್ನ ಮನೆಯಲ್ಲಿ ಇರುವಂತೆ ಕನಿಕರದಿಂದ ನರಿಯನ್ನು ಕರೆದರೆ ಮೊಲವೂ ಆ ಮರದ ತೊಗಟೆಯಿಂದ ಮಾಡಿದ ಮನೆಯಲ್ಲಿ ಇರುವುದು ಬಿಟ್ಟು ಮೊಲವನ್ನೇ ಮನೆಯಿಂದ ಹೊರಗೆ ಹಾಕಿತು. ನಂತರ ಮೊಲ, ಹುಂಜ ಮತ್ತು ಕರಡಿಯ ಸಹಾಯವನ್ನು ಕೇಳಿ ಮತ್ತೆ ಆ ಮೊಲವನ್ನು ಕತ್ತಿಯಿಂದ ಸೀಳಿತು. ಅಂದಿನಿಂದ ಮೊಲವೂ ಹುಂಜವೂ ಒಂದೇ ಮನೆಯಲ್ಲಿ ವಾಸವಾಗಿದ್ದವು. ಈ ಕಥೆಯು ಮಕ್ಕಳಲ್ಲಿ ಮತ್ತು ಓದುಗರಲ್ಲಿ ತುಂಬ ಯೋಚಿಸುವ ಮತ್ತು ಅರಿವು ಮೂಡಿಸುವ ರೀತಿಯಲ್ಲಿ ಇದೆ. ಕಷ್ಟದಲ್ಲಿ ಇರುವವರಿಗೆ ಸಹಾಯವನ್ನು ಯೋಚಿಸಿ ಮಾಡಬೇಕು ಎಂಬುವ ರೀತಿಯಲ್ಲಿ ಇದೆ.

ಲೇಖಕರು ಈ ಕಥೆಯನ್ನು ಪ್ರಾಣಿಗಳ ಮೂಲಕವಾಗಿ ಮನದುಂಬುವ ಹಾಗೆ ಚಿತ್ರಿಸಿದ್ದಾರೆ. ಹಾಗೂ ತುಂಬ ಸುಂದರವಾದ ಮಾತು ಅಥವಾ ಸಂದೇಶವನ್ನು ಸಾರುವಂತಹ ಕಥೆಯಾಗಿದೆ. ಮಕ್ಕಳಲ್ಲಿ ಕಲ್ಪನಾಶಕ್ತಿ ಬೆಳೆಯುವಂತೆ ಮೂಡುತ್ತದೆ. ಕುತೂಹಲ ತಣಿಯುತ್ತದೆ. ಮತ್ತು ಮಕ್ಕಳ ಬುದ್ಧಿ ಚಿಗುರುವಂತೆ ಮಾಡುವ ಕಥೆಯಾಗಿದೆ.

**ಮೊಲ, ಸಿಂಹ :** ಈ ಕಥೆಯಲ್ಲಿ ಸಿಂಹ ಮತ್ತು ಮೊಲ ಎಂಬ ಪ್ರಾಣಿಯನ್ನು ಕೇಂದ್ರವಾಗಿ ಇಟ್ಟುಕೊಂಡು ತುಂಬ ಒಳ್ಳೆಯ ಸಂದೇಶ ಹಾಗೂ ಉತ್ಸಾಹವನ್ನು ತರುವಂತೆ ಚಿತ್ರಿಸಿದ್ದಾರೆ. ಮೊಲ ಮತ್ತು ಸಿಂಹ ಎಂಬ ಎರಡು ಪಾತ್ರಗಳಿವೆ.

ಸಿಂಹವೂ ಪ್ರತಿದಿನ ಹತ್ತಾರು ಪ್ರಾಣಿಗಳನ್ನು ತಿನ್ನವುದನ್ನು ಗಮನಿಸಿದ ಕಾಡಿನ ಪ್ರಾಣಿಗಳು ಭಯಗೊಂಡು ಸಿಂಹ ಇದೇ ಪ್ರಕಾರ ತಿನ್ನುತ್ತಾ ಹೋದರೆ ಕಾಡು ಬಹಳ ಬೇಗ ಖಾಲಿಯಾಗುತ್ತದೆ ಎಂದು ಯೋಚಿಸಿ ಸಿಂಹಕ್ಕೆ ಪ್ರತಿದಿನ ಒಂದೊಂದು ಪ್ರಾಣಿಗಳನ್ನು ಆಹಾರವಾಗಿ ಕಳಿಸಿಕೊಡುವುದಾಗಿ ಹೇಳುತ್ತದೆ. ಅದರಲ್ಲಿ ಮರಿ ಮೊಲವೂ ಮಾಡಿದ ಉಪಾಯದಿಂದ ಸಿಂಹಕ್ಕೆ ಭ್ರಮೆ ಉಂಟಾಗಿ ತನ್ನ ಪ್ರಾಣವನ್ನು ಬಿಡುತ್ತದೆ. ಮೊಲದ ಉಪಾಯವಾದ ನಿನ್ನಂತೆಯೇ ಇನ್ನೊಂದು ಸಿಂಹ ಇದೆ ಎಂದು ಆಡಿದ ಮಾತು ಸಿಂಹಕ್ಕೆ ಬಹಳ ಕೋಪವನ್ನು ತೀರಿಸುತ್ತದೆ.

ಈ ಕಥೆಯಲ್ಲಿ ಅನುಪಮಾ ಅವರು ಯಾವುದೇ ಕೆಲಸವನ್ನು ಮಾಡುವಾಗ ಸ್ವಲ್ಪ ಯೋಚಿಸಿ ಮಾಡಬೇಕು ಮತ್ತು ಯಾರೋ ಹೇಳಿದ ಮಾತುಗಳು ಯಾವಾಗಲೂ ನಿಜವಾಗಿರುತ್ತದೆ ಎಂದು ನಂಬಬಾರದು ಎಂದು ತಮ್ಮ ಹೃದಯ ಮೆಚ್ಚುವ ಹಾಗೆ ಹೇಳಿದ್ದಾರೆ. ಮತ್ತು ಮಕ್ಕಳ ಬೌದ್ಧಿಕ ಬೆಳವಣಿಗೆಗೆ ನೆರವಾಗುತ್ತದೆ. ಅನುಕಂಪ ಬೆಳೆಯುತ್ತದೆ. ಸತ್ಯವಂತರಿಗೆ ಜಯ ಎಂಬ ನೀತಿ ಮನದಟ್ಟಾಗುತ್ತದೆ. ಈ ಕಥೆಗಳಿಂದ ಮಕ್ಕಳಿಗಾಗುವ ಉಪಯೋಗ ಬ್ರಹ್ಮಾಂಡದಷ್ಟು ಕಥೆಗಳು ಮಗುವಿನ ಕಲ್ಪನಾಶಕ್ತಿ ಬೆಳೆಯುವಂತೆ ಮಾಡುತ್ತದೆ.

ಮಕ್ಕಳ ಮನಸ್ಸು ಬೆಳೆಯುವಾಗ ಯಶಸ್ಸಿಗೆ ಯೋಗ್ಯ ಆಹಾರ ಒದಗಿಸುವುದು ತಂದೆ ತಾಯಿಯರ ಆದ್ಯ ಕರ್ತವ್ಯ. ಆ ಸಾಲಿನಲ್ಲಿ ಅನುಪಮಾ ಅವರ ಈ ಕಥೆಗಳು ಒಂದಿಷ್ಟಾದರೂ ನೆರವಾಗುವಂತೆ ಲೇಖಕರು ಚಿತ್ರಿಸಿದ್ದಾರೆ.

**ಹಾಡುವ ಕತ್ತೆ :** ಇದು ಪ್ರಾಣಿ ಸಂವೇದನೆಗೆ ಸೇರಿದ ಕಥೆಯಾಗಿದೆ. ಹಾಡುವ ಕತ್ತೆ ಎಂಬ ಹೆಸರು ಕೇಳಿದರೆ ನಮಗೆ ಯೋಚಿಸುವಂತೆ ಮಾಡುವ ಕೌಶಲ್ಯ ಈ ಹೆಸರಿಗಿದೆ. ಹೇಗೆಂದರೆ ಕತ್ತೆ ಹೇಗೆ ಹಾಡುತ್ತದೆ ಎಂಬಂತೆ ನಮ್ಮನ್ನೂ ಕ್ರಿಯಾಶೀಲರನ್ನಾಗಿ ಮಾಡುತ್ತದೆ.

ಅಗಸನೊಬ್ಬನ ಬಳಿ ಮುದಿಕತ್ತೆ ಒಂದಿತ್ತು. ಅದರಿಂದ ಏನೂ ಕೆಲಸವೂ ಸಾಗುತ್ತಿರಲಿಲ್ಲ ಎಂದು ಯೋಚಿಸಿ ಆಗಸ ಆ ಕತ್ತೆಯನ್ನು ಕಾಡಿಗೆ ಅಟ್ಟಿದ್ದನು. ನರಿ ಮತ್ತು ಕತ್ತೆ ಎರಡು ಸ್ನೇಹಿತರಾಗಿ ಕಾಡಿನಿಂದ ರೈತನೊಬ್ಬನ ತೋಟಕ್ಕೆ ಬಂದು ಸೌತೆಕಾಯಿಗಳನ್ನು ತಿನ್ನುತ್ತಿದ್ದವು. ಕತ್ತೆ ತುಂಬಾ ತಿಂದ ಬಳಿಕ ಕತ್ತೆಗೆ ಖುಷಿಯಾಯಿತು. ಅದರಿಂದ ಕತ್ತೆ ಹಾಡುತ್ತದೆ. ಹಾಡುವ ಮುಂಚೆ ನರಿಯ ಮಾತುಗಳನ್ನು ಕೇಳಿಸಿಕೊಂಡಿದ್ದಾರೆ. ಕಾವಲುಗಾರರ ದೊಣ್ಣೆಯು ಏಟಿನಿಂದ ಪಾರಾಗಬಹುದಿತ್ತು. ಮತ್ತು ಸಂಕಟ ಪಡುವ ಗತಿ ಬರುತ್ತಿರಲಿಲ್ಲ. ಈ ಕಥೆಯಲ್ಲಿ ಕತ್ತೆಯಿಂದ ನಾವು ಕಲಿಯಬೇಕಾದ ವಿಷಯವೇನೆಂದರೆ ಇನ್ನೊಬ್ಬರು ಹೇಳುವ ಮಾತುಗಳನ್ನು ಕೇಳಿ ಯೋಚಿಸಿದರೆ ಸಂಕಟ, ದುಃಖ, ನೋವು ಪಡುವ ಅವಶ್ಯಕತೆ ಇರುವುದಿಲ್ಲ. ಅನುಪಮಾ ಅವರು ಈ ಕಥೆಯನ್ನು ತುಂಬ ಸುಂದರವಾಗಿ ಎಲ್ಲರಿಗೂ ಇಷ್ಟವಾಗುವಂತೆ ಖುಷಿಪಡುವಂತೆ ರಚಿಸಿದ್ದಾರೆ.

ಒಂದು ರೀತಿ ಈ ಕಥೆಯೂ ನಮ್ಮನ್ನೂ ಪ್ರಜ್ಞಾಪೂರ್ವಕವಾಗಿ ಮಾಡುತ್ತದೆ. ಕಥೆಯನ್ನು ಒಮ್ಮೆ ಓದಿದರೆ ಮತ್ತೆ ಮತ್ತೆ ಆ ಕಥೆಯೇ ನೆನಪಿಗೆ ಬರುವಂತೆ ಮಾಡುತ್ತದೆ. ಈ ಕಥೆಯಲ್ಲಿ ನರಿ, ಕತ್ತೆ, ಕಾವಲುಗಾರರು ರೈತ, ಅಗಸ ಎಂಬ ಪಾತ್ರವನ್ನು ಕಾಣಬಹುದು. ಕತ್ತೆಯು ನಾನು ಹಾಡುತ್ತೇನೆ ಎಂದು ಹೇಳಿದಾಗ ನರಿಯು ನಿನ್ನ ಗಂಟಲು ಚೆನ್ನಾಗಿಲ್ಲ ಅಂತ ಹೇಳಿದಾಗ ಕತ್ತೆಗೆ ಕೋಪ ಬರುವುದು. ಮತ್ತು 'ನನ್ನ ಗಂಟಲು ಚೆನ್ನಾಗಿಲ್ಲ ಅಂತ ಹೇಳೋಕೆ ನಿಗೆ ಎಷ್ಟು ಧೈರ್ಯ' ನಿಂಗೆ ಹೊಟ್ಟೆ ಉರಿ ಅದಕ್ಕೆ ಹಾಗೆ ಹೇಳ್ತೀಯಾ ಎಂದು ಹೇಳುವುದು ಒಂದು ರೀತಿಯಾಗಿ ಹಾಸ್ಯ ಮತ್ತು ಕ್ರಿಯಾಶೀಲರನ್ನಾಗಿ ಮಾಡುತ್ತದೆ.

**ಮೂರ್ಖ ಮೊಸಳೆ :** ಈ ಕಥೆಯಲ್ಲಿ ಮೂರ್ಖತನದ ಬಗ್ಗೆ ಹೇಳಿದ್ದಾರೆ. ಮಕ್ಕಳಿಗೆ ಹಾಸ್ಯರೂಪ ಮತ್ತು ಯೋಚಿಸುವಂತೆ ಮಾಡುವ ಕಥೆಯಾಗಿದೆ. ಈ ಕಥೆ ಒಂದು ಪ್ರಾಣಿ ಸಂವೇದನೆಯ ಕಥೆಯಾಗಿದೆ. ಮತ್ತು ಮೊಸಳೆ, ಮೊಲ, ನರಿ ಎಂಬ ಪ್ರಾಣಿಗಳ ಪಾತ್ರವನ್ನು ಒಳಗೊಂಡಿದೆ.

ಇದರಲ್ಲಿ ಮೊಸಳೆ ತುಂಬ ಮೂರ್ಖತನವನ್ನು ತೋರಿಸುತ್ತದೆ. ಹೇಗೆಂದರೆ ಮೊಲವೂ ಹೇಳಿದ ಮಾತುಗಳನ್ನು ಕೇಳಿಸಿಕೊಳ್ಳುತ್ತಾ ಸುಮ್ಮನೆ ಮಲಗಿದ್ದರೆ ನರಿ ಮಾಡಿದ ಉಪಾಯವೂ ಉತ್ತಮವಾಗಿ ಸರಿಯಾಗುತ್ತಿತ್ತು. ಮೊಸಳೆ ತಕ್ಷಣಕ್ಕೆ ಮೊಲ ಹೇಳಿದ ಹಾಗೆ ಪೂರ್ವಜ್ಜರು ಸತ್ತ ಮೊಸಳೆಗಳು ಬಾಲ ಅಲ್ಲಾಡಿಸ್ತಾ ಇರ್ತವೆ ಅಂತ. ಈ ಮೊಸಳೆ ಸುಮ್ಮನೆ ಮಲಕ್ಕೊಂಡಿದೆಯಲ್ಲಾ" ಅಂತ ತಕ್ಷಣಕ್ಕೆ ಬಾಲವನ್ನು ಆಡಿಸಿದ್ದು ಮೂರ್ಖತನವಾಯಿತು. ನರಿಯು ಮೊಸಳೆಗೆ ಮಂತ್ರಿಯಾಗಿ ಮಾಡಬೇಕಾದ ಕರ್ತವ್ಯ ಮಾಡುತ್ತ ಇತ್ತು. ನರಿಯು ಪ್ರೇಮಕ್ಕೆ ಉತ್ತಮವಾದ ಪ್ರತಿಫಲ ದೊರಕದೆ ಇರದ ಕಾರಣದಿಂದ ನರಿ ಮೊಸಳೆಯನ್ನು ಶಪಿಸಿತು. ನರಿಯು ಹೇಳಿದ ಮಾತುಗಳನ್ನು ಕೇಳಿಸಿಕೊಂಡ ಮೊಸಳೆ ಸುಮ್ಮನೆ ಇರಬೇಕಾಗಿತ್ತು.

ಈ ಕಥೆಯು ನಿಜಕ್ಕೂ ತುಂಬ ಸುಂದರವಾದ ಕಥೆಯಾಗಿದೆ. ಮತ್ತು ಒಮ್ಮೆ ಓದಿದರೆ ಕಥೆಯನ್ನು ತುಂಬ ಇಷ್ಟಪಡುವ ಹಾಗೆ ಮಾಡುತ್ತದೆ. ಮತ್ತೆ ಮತ್ತೆ ಓದಬೇಕೆಂಬ ಆಸೆ ಉತ್ಸಾಹವನ್ನು ಮನಸ್ಸಿನಲ್ಲಿ ಹೆಚ್ಚಿಸುತ್ತದೆ. ಕಥೆಯ ಮೂಲಕವಾಗಿ ನಮ್ಮ ಜೀವನಕ್ಕೆ ಕೆಲವು ನೀತಿ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕೆಂಬ ಯೋಚನೆ ಬರುವಂತೆ ಮಾಡುತ್ತದೆ. ಸಮಾಜದಲ್ಲಿ ಎಲ್ಲರೊಂದಿಗೆ ಹೇಗೆ ಬದುಕಬೇಕು ಇನ್ನೊಬ್ಬರ ಮಾತನ್ನೂ ಏಕೆ ಕ್ರಿಯಾಶೀಲರಾಗಿ ಆಲಿಸಬೇಕು ಎಂಬ ನಿಲುವುಗಳನ್ನು ತಿಳಿಯುವಂತೆ ಮಾಡುತ್ತದೆ. ಮತ್ತು ಹೃದಯ ಮೆಚ್ಚುವಂತೆ ಲೇಖಕರು ಚಿತ್ರಿಸಿದ್ದಾರೆ.

**ಜಾಣ ಆಮೆ :** ಈ ಕಥೆಯಲ್ಲಿ ಆಮೆಯ ಜಾಣತನವನ್ನು ಲೇಖಕರು ಚಿತ್ರಿಸಿದ್ದಾರೆ. ಮತ್ತು ಜಾಣತನವನ್ನು ಮಕ್ಕಳ ಮನಸ್ಸಿಗೆ ಪ್ರಭಾವ ಬೀರುವಂತೆ ಮಾಡಿದ್ದಾರೆ. ಮನುಷ್ಯನಿಗೆ ಜಾಣತನ ಇರಬೇಕು ಹಾಗೂ ಬದುಕನ್ನೂ ಸುಲಭವಾಗಿ ಕಟ್ಟಿಕೊಳ್ಳಲು ಸಹಾಯ ಮಾಡುತ್ತದೆ.

ಆನೆ ಮತ್ತು ನೀರಾನೆ ಒಟ್ಟಿಗೆ ವಾಸಿಸುತ್ತಾ ತುಂಬಾ ಸ್ನೇಹಿತರಾಗಿ ಇದು ಯಾವಾಗಲೂ ಒಟ್ಟಿಗೆ ಊಟ ಮಾಡುತ್ತಿದ್ದವು. ಈ ಸನ್ನಿವೇಶವನ್ನೂ ಗಮನಿಸಿದರೆ ಮಕ್ಕಳಿಗೆ ಸ್ನೇಹಿತರ ಜೊತೆ ಸೇರಿ ತುಂಬ ಖುಷಿಯಿಂದ ಇರಬೇಕು ಎಂದು ಅನ್ನಿಸುತ್ತದೆ. ಹಾಗೂ ಉತ್ತಮ ಸ್ನೇಹಿತರನ್ನೂ ಮಾಡಿಕೊಳ್ಳುವುದು ಸಹ ಒಂದು ರೀತಿಯಾಗಿ ಬದುಕಿಗೆ ಸ್ಫೂರ್ತಿದಾಯಕವಾಗುತ್ತದೆ. ಎಂಬ ಮೌಲ್ಯವನ್ನು ಈ ಕಥೆಯುಲ್ಲಿ ನೋಡಬಹುದು.

ಆನೆ ಮತ್ತು ನೀರಾನೆಯ ಜೊತೆ ಸ್ನೇಹ ಮಾಡಲು ಆಮೆ ಒಂದು ಒಳ್ಳೆಯ ಉಪಾಯವನ್ನು ಮಾಡುತ್ತದೆ. ಅದರಿಂದ ಆಮೆಯು ತುಂಬ ಜಾಣತವನ್ನು ಹೊಂದಿದೆ ಎಂದು ನಮಗೆ ತಿಳಿಯುತ್ತದೆ. ಆಮೆಯು ನೀವು ನೋಡೋಕೆ ಎಷ್ಟು ಭಾರಿಯಾಗಿದೀರಿ! ಆದ್ರೆ ನಿಮ್ಮಿಬ್ಬರಿಗಿಂತ ನಾನು ಹೆಚ್ಚು ಶಕ್ತಿವಂತ ಅಂದ್ರೆ ನಿಮ್ಗೆ ಆಶ್ಚರ್ಯವಾಗಬಹುದು ಎಂದು ಹೇಳಿತು. ಅದನ್ನು ನಿಜರೂಪಕ್ಕೆ ತರಲು ಆಮೆ ತನ್ನ ಜಾಣತನದಿಂದ ಹಗ್ಗವೊಂದನ್ನು ತಂದು ನೀರಾನೆ ಮತ್ತು ಆನೆಯ ಶಕ್ತಿಯನ್ನು ಪರೀಕ್ಷೆ ಮಾಡಿ ಜಯಸಾಧಿಸಿತು. ನಂತರ ತನ್ನ ಆಸೆಯನ್ನು ಹೇಳಿ ಈಡೇರಿಸಿಕೊಂಡಿತು. ಆನೆ ಮತ್ತು ನೀರಾನೆ ಎರಡು ಸೇರಿ ಆಮೆಯನ್ನು ಸ್ನೇಹಿತನನ್ನಾಗಿ ಮಾಡಿಕೊಂಡು ಸ್ನೇಹದಿಂದ ಕಾಡಿನಲ್ಲಿ ವಾಸಿಸತೊಡಗಿದುವು. ಹೀಗೆ ಅನುಪಮಾ ನಿರಂಜನ ಅವರು ಸ್ನೇಹ ಮಾಡಿಕೊಳ್ಳುವ ರೀತಿ ಮತ್ತು ಜಾಣತವನ್ನು ಹೃದಯ ಮೆಚ್ಚುವ ಹಾಗೆ ಸುಂದರವಾಗಿ ಚಿತ್ರಿಸಿದ್ದಾರೆ. ಜಾಣತನದಿಂದ ನಾವು ಇನ್ನೊಬ್ಬರ ಸ್ನೇಹ ಮಾಡಬಹುದು ಮತ್ತು ಆದ್ದರಿಂದ ಯಾವುದೇ ರೀತಿಯ ತೊಂದರೆ ಕೋಪ ನಿರಾಸೆ ಉಂಟಾಗುವುದಿಲ್ಲ.

**ಮೃಗರಾಜನ ಕಾಯಿಲೆ :** ಇದು ಪ್ರಾಣಿ ಸಂವೇದನೆ ಕಥೆಯಾಗಿದೆ. ಮೃಗರಾಜನ ಕಾಯಿಲೆ ಅಂದರೆ ಸಿಂಹಕ್ಕೆ ತುಂಬಾ ಕಾಯಿಲೆಯಾಗಿದೆ ಎಂದು ಕಾಡಿನಲ್ಲೆಲ್ಲಾ ಸುದ್ದಿ ಹಬ್ಬಿರುತ್ತದೆ. ಈ ಸುದ್ದಿ ತಿಳಿದ ನಂತರ ಸಾಯುತ್ತಿರುವ ರಾಜನಿಗೆ ಗೌರವ ಸಲ್ಲಿಸಲು ಪ್ರಾಣಿಗಳೂ ಬರುವ ದೃಶ್ಯವನ್ನು ನೋಡಿದರೆ ನಿಜಕ್ಕೂ ಮನುಷ್ಯನಿಗಿರುವ ಕರುಣೆ, ಪ್ರೀತಿ ಗೌರವವೂ ಪ್ರಾಣಿಗಳಿಗೂ ನಿಜವಾದ ಸಂಬಂಧವಿರುತ್ತದೆ. ಎಂದು ಅನಿಸುತ್ತದೆ. ಇಲಿ, ಮೊಲ, ನವಿಲು, ಕುರಿ, ಬಾತುಕೋಳಿ, ಮೇಕೆ, ಮೃಗರಾಜ ಸಿಂಹ, ನರಿ ಎಂಬ ಪಾತ್ರವನ್ನು ಇಲ್ಲಿ ಕಾಣಬಹುದು.

ನರಿಗೆ ಹುಟ್ಟಿದ ಸಂದೇಹವನ್ನು ಗಮನಿಸದರೆ ಕೆಲವೊಮ್ಮೆ ಸಂದೇಹಪಟ್ಟಿದ್ದು ನಿಜವಾಗಿ ಬಿಡುತ್ತದೆ ಎಂದು ನಾವು ಆಲಿಸಬಹುದು. ಚಿಕ್ಕವಯಸ್ಸಿನಲ್ಲಿ ಮಕ್ಕಳಿಗೆ ಈ ದೃಶ್ಯ (ಪರಿಸ್ಥಿತಿ) ಜಾಣತವನ್ನು ಯೋಚಿಸುವಂತೆ ಮಾಡುತ್ತದೆ. ಬಾರಯ್ಯ ನರಿ ಹತ್ತಿರ ಬಂದು ಒಳ್ಳೆಯ ಮಾತುಗಳನ್ನು ನನ್ನ ಕಿವಿಲಿ ಹೇಳು ಸಿಂಹ ಹೇಳಿದ ಮಾತುಗಳನ್ನು ನರಿ ಸಂದೇಹ ಪಡುತ್ತಾ ನೋಡುವ ರೀತಿ ನಿಜಕ್ಕೂ ಸುಂದರವಾಗಿದೆ. ನರಿಗೆ ಅರ್ಥವಾಗಿದೆ ಏನಂದರೆ ಮೃಗರಾಜನಿಗೆ ಯಾವ ಕಾಯಿಲೆಯೂ ಇಲ್ಲ. ನನ್ನನ್ನೂ ತಿನ್ನಲು ಮಾಡುತ್ತಿರುವ ಉಪಾಯ ಯಾವುದೇ ಕಾರಣಕ್ಕೂ ಗುಹೆಯ ಒಳಗಡೆ ಹೋಗಬಾರದು ಎಂದು ಒಳ ಹೋಗದೆ ಸುಮ್ಮನೆ ನಿಂತು ಬಿಟ್ಟಿರುತ್ತದೆ.

ಈ ಕಥೆಯಲ್ಲಿ ಧನ್ಯವಾದ ಸಿಂಹ ರಾಜ ಪ್ರಾಣಿಗಳ ಹೆಜ್ಜೆ ಗುರುತುಗಳಲ್ಲೂ ನಿನ್ನ ಗುಹೆಯತ್ತ ಹೋಗಿವೆ. ಒಂದಾದ್ರೂ ಹೊರಗಡೆ ಬಂದ ಗುರುತುಗಳಿಲ್ಲ ಎಂದು ನಮಸ್ಕಾರ ಮಾಡುತ್ತದೆ. ಇದರಲ್ಲಿ ನರಿಯ ಮಾತುಗಳೂ ನಿಜಕ್ಕೂ ಹಾಸ್ಯರೂಪವಾಗಿದೆ. ಮೃಗರಾಜನಿಗೆ ಯಾವ ಕಾಯಿಲೆಯೂ ಇಲ್ಲ ಎಂಬ ಸತ್ಯ ನರಿಗೆ ತಿಳಿದಿರುತ್ತದೆ. ಇದು ಹೃದಯ ಮೆಚ್ಚುವ ರೀತಿ ಇದೆ. ಮಗುವಿನ ಜಾಣ್ಮೆಯನ್ನು ಬೆಳೆಸುವಂತೆ ಮಾಡುತ್ತದೆ.

**ಮೆದುಳಿಲ್ಲದ ಕತ್ತೆ :** ಈ ಕಥೆಯಲ್ಲಿ ಲೇಖಕರು ನೀಡಿರುವ ಕಥೆಯ ಹೆಸರು ಹಾಸ್ಯ ರೂಪದಲ್ಲಿದೆ. ಕಥೆಯಲ್ಲಿ ನರಿಯ ಉಪಾಯದ ಮಾತುಗಳು ತುಂಬಾ ಚೆನ್ನಾಗಿದೆ ಹಾಗೂ ಒಂದು ರೀತಿಯಾಗಿ

ಯೋಚಿಸುವಂತೆ ಮಾಡುವ ಕಥೆಯಾಗಿದೆ ಇದರಲ್ಲಿ ಸಿಂಹ, ನರಿ, ಕತ್ತೆ ಎಂಬ ಪ್ರಾಣಿಗಳಿವೆ. ಮಗುವಿನ ಮಾನಸಿಕ ಬುದ್ಧಿಶಕ್ತಿಯ ಬೆಳವಣಿಗೆಗೆ ಸಹಾಯಕವಾಗುವಂತಹ ರೂಪದಲ್ಲಿ ಲೇಖಕರು ಚಿತ್ರಿಸಿದ್ದಾರೆ ಮತ್ತು ಕತೆಯನ್ನು ತುಂಬಾ ಇಷ್ಟಪಡುವ ಹಾಗೆ ಅನಿಸುವ ರೀತಿಯಲ್ಲಿ ಸಾಮಾನ್ಯವಾದ ಭಾವನೆಗಳನ್ನು ಹೊಂದಿರುವ ಕಥೆಯಾಗಿದೆ. ಕಥೆಗಳನ್ನು ತುಂಬಾ ಮೆಚ್ಚುಗೆಯ ರೂಪದಲ್ಲಿ ವರ್ಣಿಸಿದ್ದಾರೆ.

ಮುದಿಸಿಂಹಕ್ಕೆ ಮಂತ್ರಿಯಾಗಿದ್ದ ನರಿಯು ತನ್ನ ಮಂತ್ರಿಯ ಕರ್ತವ್ಯವನ್ನು ನಿಭಾಯಿಸಲು ಮಾಡುವ ಉಪಾಯಗಳು ತುಂಬಾ ಸುಂದರವಾಗಿದೆ. ಇದರಿಂದ ನಮಗೆ ಉಪಾಯಗಳನ್ನು ಹುಡುಕುವ ಕೌಶಲ್ಯ ಮತ್ತು ಬುದ್ಧಿಶಕ್ತಿ ಬೆಳೆಯುವಂತೆ ಮಾಡುತ್ತದೆ. ನರಿ ಕತ್ತೆಯನ್ನು ಸಿಂಹದ ಬಳಿಗೆ ಕರೆದುಕೊಂಡು ಬಂದಾಗ ಕತ್ತೆಗೆ ನರಿ ಹೇಳುವ ಮಾತು ನಿಜವೆಂದು ನಂಬಿರುತ್ತದೆ ಮತ್ತು ನಿನಗೆ ಮುಖ್ಯಮಂತ್ರಿಯ ಸ್ಥಾನವನ್ನು ನೀಡಿದ್ದಾರೆ. ಸಿಂಹರಾಜ ಎಂದು ಹೇಳುವ ಮಾತುಗಳು ಕಥೆಯಲ್ಲಿ ಸುಳ್ಳಾದರು ಒಂದು ರೀತಿಯ ಸೊಬಗನ್ನು ತರುತ್ತದೆ. ಸಿಂಹವನ್ನು ನೋಡುತ್ತಾ ನರಿಯು ನಿಂತಲ್ಲೇ ನಿಂತಿತು. ಆ ಸಂದರ್ಭದಲ್ಲಿ ನರಿ ಹೇಳುವ **"ಹೊಸ ಮುಖ್ಯಮಂತ್ರಿಗಳಿಗೆ ನಿಮ್ಮನ್ನು ಕಂಡರೆ ನಾಚಿಕೆ, ಭಯ ಸಿಂಹರಾಜ"** ಎಂಬುದು ಹಾಸ್ಯರೂಪವಾಗಿದೆ.

ಲೇಖಕರು ಈ ಕಥೆಯಲ್ಲಿ ಕತ್ತೆ ಮೆದುಳನ್ನು ನರಿ ತಿನ್ನುತ್ತದೆ. ಆದರೂ ಕತ್ತೆಗೆ ಮೆದುಳಿಲ್ಲ ಸಿಂಹರಾಜ ಎಂದು ಹೇಳುವುದು, ಇಲ್ಲಿ ಚಿತ್ರಿಸಿರುವುದು ತುಂಬಾ ಸುಂದರವಾಗಿದೆ. ಈ ಕಥೆಯ ಮೂಲಕ ನಾವು ತಿಳಿದುಕೊಳ್ಳಬೇಕಾದ ವಿಷಯ(ಮೌಲ್ಯಗಳು) ಕಥೆಯಲ್ಲಿ ತುಂಬಾ ಸುಂದರವಾಗಿ ಕಾಣುತ್ತದೆ.

**ತೋಳದ ಪಾದರಕ್ಷೆಗಳು :** ತೋಳಕ್ಕೆ ಯಾರಾದರೂ ಹೊಗಳಿದರೆ ಅದಕ್ಕೆ ತುಂಬಾ ಸಂತೋಷವಾಗುತ್ತಿತ್ತು. ಇದನ್ನು ಗಮನಿಸಿದರೆ ನಮಗೆ ಯಾರಾದರೂ ನಾವು ಮಾಡುವ ಕೆಲಸ, ಅಲಂಕಾರ, ಸೌಂದರ್ಯ ಹೀಗೆ ಮುಂತಾದವುಗಳು ಕಂಡು ಬರುತ್ತದೆ. ಮತ್ತು ಹೊಗಳಿದ ತಕ್ಷಣ ಅದು ನಿಜವೆಂದು ನಂಬುವುದು ಸಹ ಒಂದು ರೀತಿಯ ದಡ್ಡತನವನ್ನು ತೋರಿಸುತ್ತದೆ. ಏಕೆಂದರೆ ಹೊಗಳಿದ ತಕ್ಷಣ ಅವರು ನಮಗೆ ಒಳ್ಳೆಯದನ್ನೇ ಬಯಸುತ್ತಿದ್ದಾರೆ ಎಂದೆಲ್ಲಾ ಹೊಗಳಿಕೆಗೆ ತೆಗಳಿಕೆಗೆ ಅವಮಾನ ಕಷ್ಟ ಇವುಗಳ ಸಹಿಸಿಕೊಂಡಿರುವುದು ಕೂಡ ಒಂದು ರೀತಿಯಾಗಿ ಮೂರ್ಖತನವಾಗುತ್ತದೆ.

ಹಾಗೆಯೇ ಈ ಕಥೆಯಲ್ಲೂ ಸಹ ತೋಳರಾಯ ನಿನಗೆ ಅಂತ ಒಳ್ಳೆಯ ರೂಪವಿದೆ. ಆದರೆ ನೀನು ಬರೀ ಕಾಲಲ್ಲಿ ನಡಿತೀಯಲ್ಲ ಅಂತ ನರಿ ತುಂಬಾ ದುಃಖವನ್ನು ವ್ಯಕ್ತಪಡಿಸುವುದು ಮತ್ತು ಆ ದುಃಖಕ್ಕೆ ನಾನು ನಿನಗೆ ಪಾದರಕ್ಷೆ ಮಾಡಿಕೊಡುತ್ತೇನೆ ಎಂದು ಹೇಳುವುದು ಮತ್ತು ಪಾದರಕ್ಷೆ ತಯಾರಿಸಲು ನಾನು ಕೇಳುವ ಸಾಮಾನುಗಳನ್ನು ತಂದುಕೊಡಬೇಕು ಎಂದು ಹೇಳುವ ಮಾತುಗಳು ನರಿಯ ಮೋಸದ ಮಾತುಗಳಾಗಿರುತ್ತದೆ. ಅದು ತೋಳರಾಯನಿಗೆ ಅರ್ಥವಾಗುವುದಿಲ್ಲ. ಹೀಗೆ ನಮಗೂ ಮೋಸದ ಮಾತುಗಳು ಹೇಗೆ ಸತ್ಯದ ಮಾತುಗಳನ್ನು ಹೇಗಿರುತ್ತವೆ ಎಂದು ತಿಳಿದುಕೊಳ್ಳುವ ಹಾಗೆ ಈ ಕಥೆಯನ್ನು ಓದಿದಾಗ ಅರ್ಥವಾಗುತ್ತದೆ.

ನರಿಯು ತನ್ನ ಹೊಟ್ಟೆಯನ್ನು ತುಂಬಿಸಿಕೊಳ್ಳಲು ತೋಳಕ್ಕೆ ಮೊದಲಿಗೆ ಮೇಕೆ, ಕುದುರೆ ಮತ್ತು ಮುಳ್ಳುಹಂದಿಯನ್ನು ಹಿಡಿದು ತರುವಂತೆ ಹೇಳುವ ಮಾತುಗಳನ್ನು ತಪ್ಪದೆ ತೋಳವು ಕೇಳುತ್ತದೆ. ಹಾಗೂ

ಎಲ್ಲಾ ಪ್ರಾಣಿಗಳನ್ನು ಕಷ್ಟಪಟ್ಟು ಹಿಡಿದು ತರುತ್ತದೆ. ಪಾದರಕ್ಷೆಗಳಿಗೋಸ್ಕರ ಆದರೂ ನರಿಯು ಉಪಾಯದಿಂದ ನಿನ್ನ ಪಾದರಕ್ಷೆಗಳು ಸುಣ್ಣದ ಹೊಂಡಕ್ಕೆ ಕಾಲಿಡುವಂತೆ ಮಾಡುವುದನ್ನು ಗಮನಿಸಿದಾಗ ತೋಳ ಮುಗ್ಧ ಪ್ರಾಣಿ ಎಂದು ಅನಿಸುತ್ತದೆ. ತನ್ನ ಹೊಗಳಿಕೆಗೋಸ್ಕರ ಕಷ್ಟಪಟ್ಟು ಕೆಲಸ ಮಾಡಿ ಮೋಸ ಹೋದಾಗ ತುಂಬಾ ದುಃಖವಾಗುತ್ತದೆ. ಲೇಖಕರು ಈ ಕಥೆಯಲ್ಲಿ ಈ ನೀತಿಯನ್ನೇ ಚಿತ್ರಿಸಿದ್ದಾರೆ.

**ಕಾಗೆ ಕಪ್ಪಾದದು :** ಅನುಪಮ ನಿರಂಜನಾ ಅವರು ಈ ಕಥೆಯಲ್ಲಿ ಬಹಳ ಹಿಂದಿನ ಕಾಲದಲ್ಲಿ ಕಾಗೆ ಪೂರ್ಣ ಬೆಳ್ಳಗಿತ್ತು. ಸ್ವರ್ಗದ ಪಕ್ಷಿಯೆಂದು ಅದನ್ನು ಕರೆಯುತ್ತಿದ್ದರು. ಬ್ರಹ್ಮನಿಗೆ ಅದು ಪ್ರಿಯವಾದ ಪಕ್ಷಿಯಾಗಿತ್ತು ಎಂಬ ಸತ್ಯವನ್ನು ವಿಶ್ಲೇಷಿಸಿದ್ದಾರೆ. ನಾವು ಈವಾಗ ಇರುವ ಕಪ್ಪಾದ ಕಾಗೆಯನ್ನು ನೋಡಿರುವುದರಿಂದ ಇದನ್ನು ಸುಳ್ಳು ಎಂದು ಹೇಳಲು ಸಾಧ್ಯವಾಗುವುದಿಲ್ಲ. ಬದಲಿಗೆ ಅವರು ಹೇಳಿರುವ ಸತ್ಯವನ್ನು ನಂಬಬೇಕಾಗುತ್ತದೆ. ಈ ಕಥೆಯಲ್ಲಿ ಬ್ರಹ್ಮ ದೇವರಿಗೆ ಕಾಗೆಯು ದೂತನಾಗಿ ಕೆಲಸ ಮಾಡುತ್ತಿರುತ್ತದೆ.

ಬ್ರಹ್ಮನು ತಯಾರಿಸಿದ ಮನುಷ್ಯ ಕೃತಿ ಒಂದನ್ನೂ ತುಂಬಾ ಸುಂದರವಾಗಿ ಕಾಣುವಂತೆ ಮಾಡಲು ಕಾಗೆ ಹೇಳಿತು. ಬ್ರಹ್ಮ ಇದಕ್ಕೆ ಜೀವ ನೀಡಲು ಗ್ರಾಮದಾಚೆಯಿಂದ ನೀರು ತರಬೇಕು ಎಂದು ಹೇಳಿದ ಮಾತನ್ನು ನಿಜ ಮಾಡಲು ಹೋಗಿ ಬಾಯಾರಿಕೆ ಬಂದು ದಾರಿಯಲ್ಲಿ ಬರುವಾಗ ಒಂದೆರಡು ಗುಟುಕ ನೀರು ಕುಡಿದರೆ ಬ್ರಹ್ಮನಿಗೆ ಹೇಗೆ ಗೊತ್ತಾಗುತ್ತದೆ ಎಂದು ಯೋಚಿಸಿ ಮಾಡಿದ ತಪ್ಪು ಅದಕ್ಕೆ ಆಪತ್ತು ತರುತ್ತದೆ. ಇದನ್ನು ಯಾರು ನೋಡುವುದಿಲ್ಲ ಎಂದು ನಾವು ತಪ್ಪು ಮಾಡಿದರೆ ಕೊನೆಗೆ ನಾವೇ ಶಿಕ್ಷೆ ಅನುಭವಿಸಬೇಕಾಗುತ್ತದೆ ಎಂಬ ಸತ್ಯವನ್ನು ಈ ಕಥೆಯು ಮೂಲಕವಾಗಿ ತಿಳಿಯಬಹುದು. ಏಕೆಂದರೆ ಬಿಳಿ ಪಾರಿವಾಳವು ಕಾಗೆ ಮಾಡಿದ ತಪ್ಪನ್ನು ನೋಡಿ ಬಂದು ಬ್ರಹ್ಮನಿಗೆ ಹೇಳುತ್ತದೆ. ಇದರಿಂದ ನಾವು ತಿಳಿಯಬೇಕಾದ ವಿಷಯವೆಂದರೆ ನಾವು ಒಬ್ಬರಿಗೆ ಮೋಸ ಮಾಡಲು ಪ್ರಯತ್ನ ಮಾಡಿದರೆ ನಮಗೆ ಮೋಸ ಮಾಡಲು ಮತ್ತೊಬ್ಬರು ಇದ್ದೇ ಇರುತ್ತಾರೆ ಎಂಬ ವಿಷಯ. ಬ್ರಹ್ಮ ನೀಡಿದ ಶಾಪದಿಂದ ಕಾಗೆ ಇವತ್ತಿಗೂ ಕಪ್ಪಾಗಿಯೇ ಇದೆ ಯಾರು ಅದನ್ನು ಗೌರವಿಸುವುದಿಲ್ಲ. ಲೇಖಕರು ಈ ಕಥೆಯನ್ನು ಒಂದು ಉತ್ತಮವಾದ ಸಂದೇಶದೊಂದಿಗೆ ಹೃದಯ ಮೆಚ್ಚುವ ಹಾಗೆ ಚಿತ್ರಿಸಿದ್ದಾರೆ.

ದಿನಕ್ಕೊಂದು ಕಥೆಯಲ್ಲಿ ಬರುವ ನೀತಿಕಥೆಗಳು, ಪ್ರಾಣಿಸಂವೇದನೆ ಕಥೆಗಳು, ಕಿನ್ನರ ಕಥಗಳು, ಮಕ್ಕಳ ಮಾನಸಿಕ ಜ್ಞಾನದ ಬೆಳವಣಿಗೆಗೆ ಸಹಾಯಕವಾಗುವಂತೆ ಇದೆ. ಕಥೆಯನ್ನು ವಿಶ್ಲೇಷಣೆ ಮಾಡುವುದರ ಮೂಲಕ ಅವುಗಳ ಮೌಲ್ಯಗಳನ್ನು ಭಾಷೆ, ಹಾಸ್ಯ ನೀತಿ, ಸ್ವರೂಪ ಜಾಣ್ಮೆ ದಡ್ಡತನ ಮೋಸಗಳ ಬಗ್ಗೆ ಜ್ಞಾನವನ್ನು ಪಡೆಯಬಹುದಾಗಿದೆ. ಕಾದಂಬರಿಯ ತರುವಾಯ ಕಥೆಯೇ ಅತ್ಯಂತ ಜನಪ್ರಿಯವಾದ ಪ್ರಕಾರ. ಕನ್ನಡದಲ್ಲಿ ಸಣ್ಣಕಥೆ ಒಂದು ವಿಶಿಷ್ಟ ರೂಪವಾಗಿ ಜನ್ಮ ತಾಳಿದುದು ಸುಮಾರು ನೂರು ವರ್ಷಗಳ ಹಿಂದೆ. ಹೊಸಗನ್ನಡದಲ್ಲಿ ಈವರೆಗೆ ಬಂದಿರುವ ಕಥೆಗಾರರ ಸಣ್ಣ ಕಥೆಗಳ ಸಂಖ್ಯೆಯನ್ನು ಪಟ್ಟಿ ಮಾಡುವುದು ಪ್ರಯಾಸದ ಕೆಲಸ, ವಾರಪತ್ರಿಕೆ, ದಿನಪತ್ರಿಕೆ, ಮಾಸಪತ್ರಿಕೆಗಳಲ್ಲಿ ಹೊಸಗನ್ನಡ ಕಥೆಗಳು ಪ್ರಕಟವಾಗುತ್ತಲೇ ಇವೆ. ಮಕ್ಕಳಿಗೆ ಕಥೆಗಳು ಸುಲಭವಾಗಿ ಅರ್ಥವಾಗುವಂತೆ ಮತ್ತು ಹೆಚ್ಚು ಇಷ್ಟಪಡುವಂತೆ ಹೃದಯ ಮೆಚ್ಚುವ ರೀತಿಯಾಗಿ ರಚನೆಗೊಂಡು ಯಶಸ್ವಿಯಾದ ಕಥೆಗಳಾಗಿವೆ. ಒಟ್ಟಿನಲ್ಲಿ ಈ ಕಥೆಗಳು ಸದ್ಗುಣಗಳನ್ನು

ಬೆಳೆಸುವಲ್ಲಿ ನೀತಿ ಬೋಧನೆಯ ಮೂಲಕ ಮಾರ್ಗದರ್ಶನ ನೀಡುವಲ್ಲಿ ಮಹತ್ವವಾದ ಪಾತ್ರವನ್ನು ವಹಿಸುತ್ತವೆ.

**ಆಕರ ಗ್ರಂಥಗಳು**


- ಅನುಪಮಾ ನಿರಂಜನರ ದಿನಕ್ಕೊಂದು ಕಥೆ (ಚೈತ್ರ ಸಂಪುಟ) – ಡಿವಿಕೆ ಮೂರ್ತಿ ಪ್ರಕಾಶನ.
- ಅನುಪಮಾ ನಿರಂಜನರ ದಿನಕ್ಕೊಂದು ಕಥೆ (ಮಾರ್ಗಶಿರ ಸಂಪುಟ) – ಡಿವಿಕೆ ಮೂರ್ತಿ ಪ್ರಕಾಶನ
- ಕನ್ನಡ ವಿಶ್ವಕೋಶ (ಸಂಪುಟ–ಮೂರು)–ಪರಿಷ್ಕೃತ, ವಿಸ್ತೃತ ಆವೃತ್ತಿ– ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ